**ಮೂರನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಕನಕಪುರ**

**ಸಿ.ಸಿ ನಂ. 181/2021**

ದಿನಾಂಕಃ**. 26.03.2026** ರಂದು ಸಾಕ್ಷಿಗೆ ಮದ್ಯಾಹ್ನ **12.20** ಗಂಟೆಗೆ ಪ್ರಮಾಣ ವಚನ ಭೋದಿಸಲಾಯಿತು.

| ಚಾಸಾ-**1** | ಪ್ರಾಸಾ-**1** |
|---|---|
| ಹೆಸರು | - ಮಹದೇವ |
| ತಂದೆ ಹೆಸರು | - ಬಸಪ್ಪ |
| ವಯಸ್ಸು | - **60** |
| ಉದ್ಯೋಗ | - ವ್ಯವಸಾಯ |
| ವಿಳಾಸ | - ಕಬ್ಬಾಳು |

**ಮುಖ್ಯವಿಚಾರಣೆ : ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರಿಂದಃ-**

ನ್ಯಾಯಾಲಯದ ಮುಂದಿರುವ ಆರೋಪಿತರು ನನಗೆ ಪರಿಚಯ. **1** ನೇ ಆರೋಪಿ ನನ್ನ ಅಣ್ಣ, **2** ನೇ ಆರೋಪಿ **1** ನೇ ಆರೋಪಿಯ ಮಗ, **3** ನೇ ಆರೋಪಿ ಅತ್ತಿಗೆ . ಚಾ.ಸಾ. **2** ನನ್ನ ಮಗ, ಚಾ.ಸಾ. **3** ಬಾಮೈದ , ಚಾ,ಸಾ. **4** ರಿಂದ **6** ಗ್ರಾಮಸ್ಥರು.

ಆರೋಪಿತರು ಮತ್ತು ನಮ್ಮ ನಡುವೆ ಗಲಾಟೆ ಆಗಿರುವುದಿಲ್ಲ. ಬಾಯಿ ಮಾತಿನ ಗಲಾಟೆ ವಿಚಾರಕ್ಕೆ ಠಾಣೆಗೆ ಹೋದಾಗ ಪೊಲೀಸರು ಬಿಳಿ ಹಾಳೆಗಳ ಮೇಲೆ ನನ್ನ ಸಹಿಯನ್ನು ಪಡೆದುಕೊಂಡಿದ್ದರು.

ಸಾಕ್ಷಿ ಒಂದು ದೂರನ್ನು ನೋಡಿ ಅದರಲ್ಲಿರುವ ಒಂದು ಸಹಿಯನ್ನು ನೋಡಿ ತನ್ನ ಸಹಿ ಮತ್ತು ದೂರು ಎಂದು ಗುರುತಿಸಿದ್ದು, ಸದರಿ **ದೂರನ್ನು** ನಿಪಿ-**1** ಎಂದು, ಸಾಕ್ಷಿ ಸಹಿಯನ್ನು ನಿಪಿ-**1**(ಎ) ಎಂದು ಗುರುತಿಸಲಾಯಿತು.

ಸಾಕ್ಷಿ ಪಂಚನಾಮೆಯನ್ನು ನೋಡಿ ಅದರಲ್ಲಿರುವ ಒಂದು ಸಹಿಯನ್ನು ನೋಡಿ ತನ್ನ ಸಹಿ ಮತ್ತು ಎಂದು ಗುರುತಿಸಿದ್ದು, **ಪಂಚನಾಮೆಯನ್ನು** ನಿಪಿ-2 ಎಂದು, ಸಾಕ್ಷಿ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

ಪೊಲೀಸರು ನನ್ನ ಸಮಕ್ಷಮ ಪಂಚನಾಮೆ ಮಾಡಿರುವುದಿಲ್ಲ ಮತ್ತು ಏನನ್ನು ವಶಪಡಿಸಿಕೊಂಡಿರುವುದಿಲ್ಲ.

ನಾನು ಪೋಲಿಸರಿಗೆ ಯಾವುದೇ ಹೇಳಿಕೆ ಕೊಟ್ಟಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ಧವಾಗಿ ಸಾಕ್ಷ್ಯ ನುಡಿದಿರುವುದರಿಂದ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲನ್ನು ಮಾಡಲು ಮಾನ್ಯ ಸರ್ಕಾರಿ ಅಭಿಯೋಜಕರು ರವರು ಅನುಮತಿಯನ್ನು ಕೋರಿದ್ದು, ಅನುಮತಿಯನ್ನು ನೀಡಲಾಯಿತು.)

**<u>ಪಾಟೀ ಸವಾಲುಃ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-</u>**

ದಿ. **07.12.2020** ರಂದು ಬೆಳಗ್ಗೆ **7** ಗಂಟೆ ಸಮಯದಲ್ಲಿ ಕಂಸಾಗರ ಗ್ರಾಮದ ಸ ನಂ **34/1** ರ ಜಮೀನಿನಲ್ಲಿ ನಾನು ಹಾಗು ಚಾ.ಸಾ. **3** ರಿಂದ **4** ರವರು ರೇಷ್ಮೆ ಕಡ್ಡಿಗೆ ನೀರು ಹಾಯಿಸಲು ಹೋದಾಗ ಆರೋಪಿತರು ಬೋರ್ವೆಲ್ ಅವರಿಗೆ ಸೇರಬೇಕೆಂದು ಜಮೀನಿನ ಭಾಗದ ವಿಚಾರವಾಗಿ ನನಗೆ ಮತ್ತು ಚಾ.ಸಾ. **2** ರವರಿಗೆ ಜಮೀನಿನಲ್ಲಿ ಅಡ್ಡಗಟ್ಟಿ ಅವಾಚ್ಯ ಶಬ್ದಗಳಿಂದ ಬೈದು **1**ನೇ ಆರೋಪಿ ದೊಣ್ಣೆಯಿಂದ ನನ್ನ ತಲೆ ಮೇಲೆ ಹೊಡೆದಿದ್ದು, **2**ನೇ ಆರೋಪಿ ಅದೇಪ ದೊಣ್ಣೆಯಿಂದ ಚಾ.ಸಾ. **2** ರವರ ಬಲಗೈಗೆ ಹೊಡದು ನೋವುಂಟು ಮಾಡಿ ಆರೋಪಿತರು ನನಗೆ ಮತ್ತು ಚಾ.ಸಾ. **2** ರವರಿಗೆ ಕೊಲೆ ಬೆದರಿಕೆ ಹಾಕಿದರು ಎಂದರೆ ಸರಿಯಲ್ಲ. ಈ ಬಗ್ಗೆ ನಾನು ನಿ.ಪಿ.**1** ರಂತೆ ದೂರು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

ದಿ. **12.12.2020** ರಂದು ನನ್ನ ಹಾಗೂ ಚಾಸಾ-**5** ಮತ್ತು **6** ರವರ ಸಮಕ್ಷಮ ಪೊಲೀಸರು ನಿಪಿ- **2** ರ ಪ್ರಕಾರ ಬೆಳಗ್ಗೆ **10.30** ಗಂಟೆಯಿಂದ **11.45** ಗಂಟೆವರೆಗೆ

ಪಂಚನಾಮೆ ಮಾಡಿ ಒಂದು ದೊಣ್ಣೆಯನ್ನು  ವಶಪಡಿಸಿಕೊಂಡರು ಎಂದರೆ ಸರಿಯಲ್ಲ.

ಸಾಕ್ಷಿಗೆ ದಿಃ **12.12.2020** ರಂದು ಅವನು ಪೊಲೀಸರಿಗೆ ನೀಡಿದ ಎಂಬ ಮುಂದುವರೆದ ಹೇಳಿಕೆಯ ಭಾಗವಾದ "ದಿ. **12.11.2020 …….**ಮರುಹೇಳಿಕೆ ನೀಡಿರುತ್ತೇನೆ **",** ಒದಿ ಹೇಳಿದಾಗ ಅಲ್ಲಗಳೆದಿದ್ದರಿಂದ ಸದರಿ ಹೇಳಿಕೆ ಭಾಗವನ್ನು **ನಿಪಿ-3** ಎಂದು ಗುರುತಿಸಲಾಯಿತು.

ಆರೋಪಿಯೊಂದಿಗೆ ರಾಜಿ ಮಾಡಿಕೊಂಡಿರುವ ಕಾರಣ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲು: ಆರೋಪಿತರ ಪರ ಶ್ರೀ. ವಕೀಲರಿಂದಃ**

ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

ಮರುವಿಚಾರಣೆ ಇಲ್ಲ.

(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಮದ್ಯಾಹ್ನ **12.35** ಗಂಟೆಯವರೆಗೆ ಪಡೆದುಕೊಂಡಿರುತ್ತೇನೆ ಎಂದು ಧೃಢೀಕರಿಸುತ್ತೇನೆ)

ಓದಿ ಹೇಳಿ ಕೇಳಿ ಸರಿ ಇದೆ,

**ಮೂರನೇ ಅಪರ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್ ಸಿ., ಕನಕಪುರ.**